# ಭತ್ತದ ತಾಕುವಿನಲ್ಲಿ ರೋಗ–ಕೀಟ ನಿರ್ವಹಣೆ ಕುರಿತ ಪದ್ಧತಿ ಪಾತ್ಯಕ್ಷಿಕೆ

**ಸುತ್ತೂರು, ನವೆಂಬರ್ 09, 2019:** ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಹೆಚ್.ಡಿ. ಕೋಟೆ ತಾಲ್ಲೂಕಿನ ನಿಲುವಾಗಿಲು ಗ್ರಾಮದಲ್ಲಿ ರೈತರಿಗೆ ಭತ್ತದ ತಾಕುವಿನಲ್ಲಿ ರೋಗ–ಕೀಟ ನಿರ್ವಹಣೆ ಕುರಿತ ಪದ್ಧತಿ ಪಾತ್ಯಕ್ಷಿಕೆಯನ್ನು ತರಬೇತಿ ಹಮ್ಮಿಕೊಳ್ಳಲಾಗಿತ್ತು.

ಹೆಚ್.ಡಿ. ಕೋಟೆ ತಾಲ್ಲೂಕಿನ ನಿಲುವಾಗಿಲು ಗ್ರಾಮದ ಸುತ್ತಮುತ್ತಲ ಭತ್ತದ ತಾಕುಗಳಲ್ಲಿ ಗರಿತಿನ್ನುವ ಹುಳು, ಕಾಂಡ ಕೊರೆಯುವ ಹುಳು ಮತ್ತು ಸುಳಿ ಒಣಗುವ ರೋಗ ಕಂಡು ಬಂದಿದೆ. ಸದರಿ ಕೀಟ ಬಾಧೆಗೆ ಒಂದು ಎಕರೆಗೆ 6 ಮೋಹಕ ಬಲೆಗಳನ್ನು ಅಳವಡಿಸುವುದರಿಂದ ಕೀಟಗಳನ್ನು ನಿಯಂತ್ರಿಸಬಹುದಲ್ಲದೆ, ಕೀಟನಾಶಕಗಳ ಬಳಕೆಯಿಂದ ರೈತರ ಖರ್ಚು ಕಡಿಮೆಯಾಗುವುದಲ್ಲದೆ ಪರಿಸರ ಮಾಲಿನ್ಯವು ಸಹ ಕಡಿಮೆಯಾಗುತ್ತದೆ ಎಂದು ಕೃಷಿ ವಿಜ್ಞಾನ ಕೇಂದ್ರದ ಸಸ್ಯ ಸಂರಕ್ಷಣಾ ವಿಷಯದ ವಿಜ್ಞಾನಿಯಾದ ಶ್ರೀ ಎಸ್. ಸತೀಶ್ ರವರು ಪದ್ಧತಿ ಪಾತ್ಯಕ್ಷಿಕೆಯ ಮೂಲಕ ಸಲಹೆ ನೀಡಿದರು.

ಜೈಪುರದ ಸುರೇಶ ಜ್ಞಾನ ವಿಹಾರ್ ಕೃಷಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು, ಕೃಷಿ ಅಧಿಕಾರಿಗಳು, ರೈತರು ಈ ಪದ್ಧತಿ ಪ್ರಾತ್ಯಕ್ಷಿಕೆಯಲ್ಲಿ ಭಾಗವಹಿಸಿದ್ದರು.



ಭತ್ತದ ತಾಕುವಿನಲ್ಲಿ ಕೀಟಗಳ ನಿರ್ವಹಣೆಗೆ ಮೋಹಕ ಬಲೆ ಅಳವಡಿಕೆಯ ಪದ್ಧತಿ ಪ್ರಾತ್ಯಕ್ಷಿಕೆ ನೀಡುತ್ತಿರುವುದು